ಶ್ರೀ ಎಂ. ಪಿ. ಪ್ರಕಾಶ್.—ಸೈಟ್ ನಂ. ೨೧ ವರಲಕ್ಷ್ಮಿ ಪ್ರಕಾಶ್ ಅವರದ್ದು, ಸೈಟ್ ನಂ. ೧೩ ಕನಕಲತ ರೆಡ್ಡಿ ಅವರದ್ದು, ಸೈಟ್ ನಂ. ೧೮ ಅರುಣ ಕಲ್ಯಾಣ ಪೂರ ಅವರದ್ದು. ಅವರು ಕಟ್ಟಬೇಕಾದ ಹಣವನ್ನು ಕಟ್ಟಿದರು. ಆ ಮೂಲಕ ಅವರು ಸ್ವಾಧೀನದ ಹಕ್ಕು ಪತ್ರವನ್ನು ತೆಗೆದುಕೊಂಡರು. ಉಳಿದವರು ತೆಗೆದುಕೊಳ್ಳಲಿಲ್ಲ. ೧೯೮೨-೮೩ರಲ್ಲಿ ಇತರರು ಒಂದು ಲಕ್ಷ ರೂಪಾಯಿಗಳನ್ನು ಕಟ್ಟಬೇಕಾಗಿತ್ತು. ಅದನ್ನು ಅವರು ಕಟ್ಟಲಿಲ್ಲ. ಕಟ್ಟದೇ ಇದ್ದ ಸಂದರ್ಭದಲ್ಲಿ ಪ್ರಾಧಿಕಾರದಿಂದ ಮತ್ತೆ ತಿಳಿವಳಿಕೆ ಪತ್ರವನ್ನು ಕೊಡಲಾಯಿತು. ಕೊಟ್ಟರೂ ಅನಿವಾರ್ಯ ಕಾರಣದಿಂದ ಆರ್ಥಿಕ ಮುಗ್ಗಟ್ಟು ಇರಬಹುದು, ಅಥವಾ ಇನ್ನೇನೋ ಕಾರಣ ಇರಬಹುದು. ಈ ಸಂದರ್ಭಗಳ ನಡುವೆ ಶ್ರೇಷ್ಠ ನ್ಯಾಯಾಲಯದಿಂದ ಒಂದು ತೀರ್ಮಾನ ಬಂತು. ಯಾವುದಾದರೂ ಸಾರ್ವಜನಿಕ ಉದ್ದೇಶಕ್ಕೆ ಭೂಮಿಯನ್ನು ಸ್ವಾಧೀನ ತೆಗೆದುಕೊಂಡು ಅದರ ಮೂಲಕ ಎಲ್ಲಾ ಕಾರ್ಯಗಳನ್ನು ಪರಿಪೂರ್ಣವಾಗಿ ಮಾಡಿದ ನಂತರ ಅದನ್ನು ಮರಳಿ ಒಡೆಯರಿಗೆ ವಹಿಸಿಕೊಡತಕ್ಕದ್ದು, ಅದರಲ್ಲಿ ಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು. ಆ ಕಾರಣಕ್ಕಾಗಿ ಅನಿವಾರ್ಯವಾಗಿ ಪೇಜಿಗೆ ಸಿಕ್ಕಿದ್ದೇವೆ. ಪಕ್ಷಪಾತ ಮಾಡುವುದಾಗಲಿ, ತೊಂದರೆ ಕೊಡಬೇಕೆಂಬ ಉದ್ದೇಶ ಪ್ರಾಧಿಕಾರಕ್ಕೆ ಇಲ್ಲ. ಡಿಸ್ಕ್ರಿಮಿನೇಷನ್ ಮಾಡಿದ್ದಾರೆಂಬುದು ಇದ್ದರೆ ಶ್ರೇಷ್ಠ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು. ಸಹಾನುಭೂತಿಯಿಂದ ಪರಿಶೀಲಿಸುವುದಕ್ಕೆ ಸಾಧ್ಯತೆ ಇದ್ದರೆ ಖಂಡಿತ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನತಾ ಮನೆಗಳು.

೧೬೨೫. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬-೮೭, ೧೯೮೭-೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣ ಮಾಡಲಾಗಿರುವ ಜನತಾ ಹುಡ್ಕೋ ಗೃಹಗಳೆಷ್ಟು, (ತಾಲ್ಲೂಕುವಾರು ವಿವರ ನೀಡುವುದು).

ಆ) ಆ ಸಾಲಿನಲ್ಲಿ ಜನತಾ ಮನೆಗಳಿಗಾಗಿ ಹುಡ್ಕೋ ಮನೆಗಳಿಗಾಗಿ ಬಂದ ಅರ್ಜಿಗಳೆಷ್ಟು.

ಇ) ಅವುಗಳಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳೆಷ್ಟು.

ಈ) ಆ ಪೈಕಿ ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಸದರಿ ಯೋಜನೆಗಳಲ್ಲಿ ನೀಡಿರುವ ಗೃಹಗಳ ಸಂಖ್ಯೆಯೆಷ್ಟು?

ಶ್ರೀ ಮೊಹಮ್ಮದ್ ಮೊಯಿನುದ್ದೀನ (ವಸತಿ ರಾಜ್ಯ ಸಚಿವರು). —

ಅ) ೧೯೮೬-೮೭ ... ೧೮೮೩
೧೯೮೭-೮೮ ... ೧೧೭೬
ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಆ) ೧೯೮೬-೮೭ ... ೩೨೧೧
೧೯೮೭-೮೮ ... ೨೨೭೧

ಇ) ೧೪೫೮

ಈ) ೧೯೮೬-೮೭ ... ೩೯೬
೧೯೮೭-೮೮ ... ೪೫೦

ಅನುಬಂಧ

೧೯೮೬—೮೭, ೧೯೮೭-೮೮ನೇ ಸಾಲಿನಲ್ಲಿ ನಿರ್ಮಾಣ ಮಾಡಲಾಗಿರುವ/ಮಂಜೂರಾತಾಲ್ಲೂಕುವಾರು ಜನತಾ ಹುಡ್ಕೋ ಮನೆಗಳ ವಿವರ.

ಕ್ರಮ ಸಂಖ್ಯೆ	ತಾಲ್ಲೂಕು	೧೯೮೬-೮೭	೧೯೮೭-೮೮
೧.	ಕುಂದಾಪುರ	೨೯೦	೧೨೮
೨.	ಉಡುಪಿ	೨೪೭	೪೨೯
೩.	ಕಾರ್ಕಳ	೨೬೩	೨೨೬
೪.	ಮಂಗಳೂರು	೧೪೧	೧೦
೫.	ಬಂಟ್ವಾಳ	೩೯೩	೧೪೯
೬.	ಬೆಳ್ತಂಗಡಿ	೧೫೭	೨೬
೭.	ಪುತ್ತೂರು	೧೯೮	೧೧೪
೮.	ಸುಳ್ಯ	೧೯೪	೫೨
	ಒಟ್ಟು	೧೪೪೩	೧೧೭೬

ಶ್ರೀ ಬಿ.ಎಂ. ಇದಿನಬ್ಬ —೧೯೮೬-೮೭ರಲ್ಲಿ ೧೪೪೩ ಮನೆಗಳು, ೮೭—೮೮ರಲ್ಲಿ ೧೧೭೬ ಮನೆಗಳು ಎಂದು ಹೇಳಿದ್ದೀರಿ. ಜನರು ಜನತಾ ಹುಡ್ಕೋ ಮನೆಗಳು ಬೇಕೆಂದು ಕೇಳುತ್ತಿರುವಾಗ ಈ ರೀತಿ ೮೭—೮೮ರಲ್ಲಿ ಮನೆಗಳ ನಿರ್ಮಾಣದ ಸಂಖ್ಯೆ ಕಡಿಮೆಯಾಗುವುದಕ್ಕೆ ಕಾರಣವೇನು?

ಶ್ರೀ ಮಹಮ್ಮದ್ ಮೊಹಿನುದ್ದೀನ್.—೧೯೮೬—೮೭ರಲ್ಲಿ ೨೮೯೬ ಮನೆಗಳನ್ನು, ೮೭—೮೮ರಲ್ಲಿ ೨೭೮೦ ಮನೆಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಮಂಜೂರ್ಮಾಡಲಾಗಿದೆ. ಆದರಲ್ಲಿ ಕಡಿಮೆ ಯಾವುದು ಜಾಸ್ತಿ ಯಾವುದು ಎಂದು ಹೇಳುವುದಕ್ಕಾಗುವುದಿಲ್ಲ. ಹೆಚ್ಚು ಕಡಿಮೆ ನೂರು ಆ ಕಡೆ, ಈ ಕಡೆ ಆಗಿದೆ. ವರ್ಷದ ಬಜೆಟ್ಟಿನಲ್ಲಿ ಎಷ್ಟು ಪ್ರಾವಿಜನ್ ಮಾಡಿಕೊಂಡಿರುತ್ತಾರೋ ಅಷ್ಟನ್ನು ಕಟ್ಟಲಿಕ್ಕೆ ಆಗುತ್ತದೆ. ಇನ್ನು ಮುಂದೆ ಜಿಲ್ಲಾ ಪರಿಷತ್ತಿನವರು ಈ ಕಾರ್ಯವನ್ನು ತೆಗೆದುಕೊಳ್ಳುವ ಪ್ರಯುಕ್ತ ಎಷ್ಟು ಜಾಸ್ತಿ ಮಾಡಬಹುದಕ್ಕಾಗುತ್ತದೋ ಅಷ್ಟನ್ನು ಮಾಡುತ್ತಾರೆ.

ಶ್ರೀ ಬಿ. ಎಂ. ಇದಿನಬ್ಬ —೧೪೩೮ ಅರ್ಜಿಗಳು ಬಾಕಿ ಇವೆ ಎಂದು ಹೇಳಿದ್ದಾರೆ. ಅಧಿಕಾರಿಗಳು ಕೆಲಸದ ಕಡೆ ಹೆಚ್ಚು ಗಮನ ಕೊಡದೆ ಇರುವುದರಿಂದ ಬಾಕಿ ಉಳಿಯಲು ಕಾರಣವಾಗಿದೆ ಎಂದು ನನ್ನ ಅಭಿಪ್ರಾಯ ಏಕೆಂದರೆ ಇವತ್ತಿನ ದಿವಸ ಜನತಾ ಮನೆಗಳನ್ನು ಬಹಳಷ್ಟು ಮಂದಿ ಹಳ್ಳಿಗರು ಕೇಳುತ್ತಿದ್ದಾರೆ. ಆದ್ದರಿಂದ ತೀವ್ರವಾಗಿ ಕೆಲಸ ಮಾಡುವಂತೆ ಅವರಿಗೆ ಆದೇಶ ಕೊಡುತ್ತೀರಾ?

ಶ್ರೀ ಮಹಮ್ಮದ್ ಮೊಹಿನುದ್ದೀನ್.—ಆದಷ್ಟು ಜಾಗ್ರತೆ ಅವುಗಳನ್ನು ಇತ್ಯರ್ಥ ಮಾಡುವುದಕ್ಕೆ ಆದೇಶ ನೀಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.—ಸ್ವಾಮಿ, ಜನತಾ ಮನೆಗಳಿಗೆ ಬಹಳ ಬೇಡಿಕೆ ಇದೆ. ಆದರೆ ೧೯೮೪-೮೫ರ ಸಾಲಿನಲ್ಲಿ ತೆಗೆದುಕೊಂಡ ಮನೆಗಳಿಗೇ ಇನ್ನೂ ಪೂರ್ತಿ ಹಣವನ್ನು ಕೊಡದೇ ಇರುವಾಗ ೮೬-೮೭ನೇ ಸಾಲಿನಲ್ಲಿ ತೆಗೆದುಕೊಂಡ ಮನೆಗಳಿಗೆ ಹಣ ಕೊಡಿ ಎಂದು ಕೇಳುತ್ತಿರುವುದು ಸರಿಯೆ ? ಮೊದಲು ಯಾವುದಕ್ಕೆ ಹಣ ಕೊಡಬೇಕೆಂಬುದನ್ನು ತಾವೇ ಹೇಳಿ. ಈಗ ೧೯೮೪-೮೫ರ ಸಾಲಿನಲ್ಲಿ ತೆಗೆದುಕೊಂಡ ಮನೆಗಳಿಗೆ ಸಂಬಂಧಪಟ್ಟಂತೆ ಹಣವನ್ನು ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಮಹಮ್ಮದ್ ಮೊಯಿನುದ್ದೀನ್.—೧೯೮೪-೮೫ರ ಸಾಲಿನ ಮನೆಗಳಿಗೆ ಕೊಡಬೇಕಾದ ಹಣವನ್ನು ಪೂರ್ತಿಯಾಗಿ ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, ಪರಿಶಿಷ್ಟ ವರ್ಗದ ಜನರಿಗೆ ೮೬–೮೭ರ ಸಾಲಿನಲ್ಲಿ ೫೯೬ ಮನೆಗಳು ೮೭–೮೮ರ ಸಾಲಿನಲ್ಲಿ ೪೫೦ ಮನೆಗಳು ಕೊಡಲ್ಪಟ್ಟಿವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಪರಿಶಿಷ್ಟ ವರ್ಗದ ಜನರಿಂದ ಅರ್ಜಿಗಳು ಹಚ್ಚಿಗೆ ಬಂದರೂ ಕೂಡ ಅದಕ್ಕೆ ರಾಜ್ಯ ಸರ್ಕಾರ ಹೆಚ್ಚಿನ ಗಮನವನ್ನು ಕೊಡುತ್ತಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಮಹಮದ್ ಮೊಯಿನುದ್ದೀನ್.—೧೮ ಪರ್ಸೆಂಟ್ ಮೇನ್‌ಟೇನ್ ಮಾಡುವುದಕ್ಕೆ ಎಷ್ಟು ಸಾಧ್ಯವೋ ಅಷ್ಟೂ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿಗೆ ಸಾಧ್ಯವಾದರೆ ಅದಕ್ಕೂ ಪ್ರಯತ್ನ ಮಾಡುತ್ತೇವೆ.

ಗ್ರಾಮೀಣ ನೀರು ಸರಬರಾಜು.

೧೮೫೫. ಶ್ರೀ ವೀರಕುಮಾರ ಎ. ಪಾಟೀಲ (ನಿಪ್ಪಾಣಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಾರಂಭದಿಂದ ಈವರೆಗೆ ಬೆಳಗಾಂವ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಾಗಾಣಿಕೆಗಾಗಿ ಬೆಳಗಾಂವಿಯ ಜಿಲ್ಲಾ ಪರಿಷತ್ತಿನವರು ಖರ್ಚು ಮಾಡಿದ ಹಣವೆಷ್ಟು ? (ತಾಲ್ಲೂಕುವಾರು ವಿವರ ನಮೂದಿಸುವುದು)

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್, ವಕ್ಫ್ ಹಾಗೂ ಸಂಗೋಪನಾ ಮಂತ್ರಿಗಳು).—

ಅ)

ನಂ.	ತಾಲ್ಲೂಕಿನ ಹೆಸರು	ಖರ್ಚು ಮಾಡಿದ ಹಣ
೧	ಬೆಳಗಾಂವ	ರೂ. ೧,೮೩,೯೪೨–೬೦
೨	ಖಾನಾಪುರ	ರೂ. ೨೬,೨೬೩–೦೦
೩	ಹುಕ್ಕೇರಿ	ರೂ. ೭,೭೮,೦೧೦–೬೦
೪	ಬೈಲಹೊಂಗಲ	ರೂ. ೭,೧೩,೩೪೬–೧೦
೫	ಸವದತ್ತಿ	ರೂ. ೫,೯೩,೩೦೫–೪೫
೬	ಗೋಕಾಕ್	ರೂ. ೨,೭೭,೨೧೨–೪೦
೭	ರಾಮದುರ್ಗ	ರೂ. ೫,೪೪,೬೭೭–೦೦
೮	ಚಿಕ್ಕೋಡಿ	ರೂ. ೧,೬೩,೯೮೦–೦೬
೯	ರಾಯಬಾಗ	
೧೦	ಅಥಣಿ	
	ಒಟ್ಟು	ರೂ. ೩೨,೮೦,೭೩೭–೨೧

SRI VEERKUMAR A. PATIL.—Sir, the Government is spending about Rs. 32,80,000 for transportation of drinking water in the district. However, has come to the notice that the trcuk or lorry owners are not giving water properly. The BDOs and Zilla Parishad Chief Secretaries have given some schedule of trips to the concerned